**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ</u>**

ದಿನಾಂಕಃ **15.12.2025**

**<u>ಸಿ.ಸಿ.ಸಂಖ್ಯೆಃ 611/2024</u>**

ಫಿರ್ಯಾದುದಾರರು ಃ ಅಬಕಾರಿ ನಿರೀಕ್ಷಕರ ಕಛೇರಿ,
ಶ್ರೀರಂಗಪಟ್ಟಣ ವಲಯ,
ಶ್ರೀರಂಗಪಟ್ಟಣ ತಾಃ ಮಂಡ್ಯ ಜಿಃ

ಃ ವಿರುದ್ಧ ಃ

ಆರೋಪಿ ಃ ಎಂ.ಕೆ.ಪುಟ್ಟೇಗೌಡ ಬಿನ್ ಲೇಃ ಕರೀಗೌಡ,
ಸುಮಾರು 54 ವರ್ಷ,
ವಾಸಃ ಮಾರ್ಮಹಳ್ಳಿ ಗ್ರಾಮ, ಚಿನಕುರಳಿ
ಹೋಬಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

## <u>ದೋಷಾರೋಪಣೆ</u>

**ಶ್ರೀಮತಿ. ಪಾರ್ವತಮ್ಮ.ಬಿ, ಬಿ.ಎ, ಎಲ್.ಎಲ್.ಎಂ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.**

ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ದಿನಾಂಕ: 04-10-2023 ರಂದು ಸಂಜೆ 04-30 ಗಂಟೆಯ ಸಮಯದಲ್ಲಿ ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಚಿನಕುರಳಿ ಗ್ರಾಮದಲ್ಲಿ ಗಸ್ತು ನಡೆಸುತ್ತಿದ್ದ ಸಮಯದಲ್ಲಿ ಇವರ ದೂರವಾಣಿ ಕರೆಗೆ ಬಂದ ದೂರಿನ ಸಂಬಂಧ ಸಿಬ್ಬಂದಿಗಳೊಂದಿಗೆ ಹಾಗೂ ಪಂಚರರೊಂದಿಗೆ ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಮಾರ್ಮಳ್ಳಿ ಗ್ರಾಮಕ್ಕೆ ತೆರಳಿ ಆರೋಪಿಗೆ ಸೇರಿದ ಮನೆಯ ಹತ್ತಿರ ಹೋಗಿ ಮನೆಯ ಮುಂಭಾಗದಲ್ಲಿ ಒಂದು ಬಿಳಿಯ ಬಣ್ಣದ ಹೋಂಡಾ ಆಕ್ಟಿವಾ 5 ಜಿ ದ್ವಿಚಕ್ರ ವಾಹನದ ಹತ್ತಿರ ಒಬ್ಬ ಆಸಾಮಿಯು ಇಲಾಖಾ ವಾಹನ ಹಾಗೂ ಸಮವಸ್ತ್ರಧಾರಗಳಾದ ನಮ್ಮಗಳನ್ನು ಕಂಡು ಓಡಿಹೋಗಿದ್ದು, ನಂತರ ಸದರಿ ವಾಹನವನ್ನು ಪರೀಶೀಲಿಸಲಾಗಿ ಸೀಟಿನ ಕೆಳಗಿರುವ ಡಿಕ್ಕಿಯೊಳಗೆ ಒಂದು ಪ್ಲಾಸ್ಟೀಕ್ ಚೀಲವನ್ನು ತೆರದು ನೋಡಲಾಗಿ ವಿವಿಧ ಮಾದರಿಯ

ಒಟ್ಟು 4.770 ಲೀಟರ್ ಮದ್ಯ ಹಾಗೂ ಬಿಳಿ ಬಣ್ಣದ ಹೋಂಡಾ ಆಕ್ಟಿವಾ 5 ಜಿ ದ್ವಿಚಕ್ರ ವಾಹನ ಸಂಖ್ಯೆ:ಕೆ.ಎ-11.ಇಎನ್-5839 ನಂತರ ಪಂಚರರ ಸಮಕ್ಷಮ ಇಲಾಖಾ ವಶಕ್ಕೆ ತೆಗೆದುಕೊಂಡು ಸದರಿ ಮದ್ಯವನ್ನು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ-32(1) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನಿಮ್ಮ ಬಾಬ್ತು ವಾಹನ ಸಂಖ್ಯೆ:ಕೆ.ಎ-11.ಇಎನ್-5839 ಬಿಳಿ ಬಣ್ಣದ ಹೋಂಡಾ ಆಕ್ಟಿವಾ 5 ಜಿ ದ್ವಿಚಕ್ರದಲ್ಲಿ ಮೇಲ್ಕಂಡ ಮದ್ಯಗಳನ್ನು ಸ್ವಾಧೀನದಲ್ಲಿಟುಕೊಂಡಿರುವ ಕಾರಣ ಕರ್ನಾಟಕ ಅಬಕಾರಿ ಕಾಯ್ದೆ ಕಲಂ-38(ಎ) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಪ್ರಶ್ನೆ:1ಃ ಈಗ ನಿಮಗೆ ಓದಿ ಹೇಳಿದ ಆರೋಪದ ಸಾರಾಂಶ ತಿಳಿಯಿತೇ?
ಉತ್ತರಃ

ಪ್ರಶ್ನೆ:2ಃ ಈಗ ನೀನು ಓದಿಸಿಕೊಂಡು ತಿಳಿದ ಆರೋಪಕ್ಕೆ ತಪ್ಪೊಪ್ಪುವೆಯೋ ಅಥವಾ ಅಧಿವಿಚಾರಣೆಯಾಗಲೀ ಎನ್ನುವೆಯೋ?
ಉತ್ತರಃ

(ಆರೋಪಿತನ ಯಥಾವತ್ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯ್ತು.)

**(ಪಾರ್ವತಮ್ಮ.ಬಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ ನ್ಯಾಯಾಲಯ, ಪಾಂಡವಪುರ.**

ಆರೋಪಿಯ ಸಹಿಃ